ಕರ್ನಾಟಕ ವಿಧಾನ ಸಭೆ

ಗುರುವಾರ 21 ನೇ ಸೆಪ್ಟೆಂಬರ್ 1995 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-20 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀ ಎಂ. ಎಸ್. ಪಾಟೀಲ್) : ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ :- ನಿಡಗುಂದಿ ಗ್ರಾಮಕ್ಕೆ ಬಸ್ ಸ್ಟ್ಯಾಂಡ್ ನಿರ್ಮಾಣ.

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 396 (2936)

ಶ್ರೀ ಎಸ್. ಎಂ. ದೇಸಾಯಿ (ಹೂವಿನ ಹಿಪ್ಪರಗಿ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಿಡಗುಂದಿಯಲ್ಲಿ ಬಸ್ಸು ಸ್ಟ್ಯಾಂಡ್ ನಿರ್ಮಿಸುವ ಬಗ್ಗೆ ಅಡಿಗಲ್ಲು ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದು ಯಾವಾಗ ಅಡಿಗಲ್ಲು ಹಾಕಲಾಗಿದೆ?

ಇ) ಅಡಿಗಲ್ಲು ಹಾಕಿದ್ದಲ್ಲಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :-

ಅ) ಹೌದು

ಆ) ದಿನಾಂಕ 17-8-87 ರಂದು ಅಡಿಗಲ್ಲು ಹಾಕಲಾಗಿದೆ.

ಇ) ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

ಶ್ರೀ ಎಸ್. ಎಂ. ದೇಸಾಯಿ :- ಮಾನ್ಯ ಉಪಾಧ್ಯಕ್ಷರೆ, ನಿಡಗುಂದಿ ಬಸ್ ಸ್ಟ್ಯಾಂಡನ್ನು ಕಟ್ಟಲಿಕ್ಕೆ ಅಡಿಗಲ್ಲು ಯಾವಾಗ ಇಟ್ಟಿದ್ದುದು ಎಂದು ಕೇಳಿದ್ದೆ. 1987 ನೇ ಸಾಲಿನಲ್ಲಿ ಅಡಿಗಲ್ಲು ಹಾಕಲಾಗಿದೆ ಎಂದು ಹೇಳಿದ್ದಾರೆ. 1987 ರಲ್ಲಿ ಅಡಿಗಲ್ಲು ಹಾಕಿದ್ದು ಈಗ 1995 ನೇ ಇಸವಿ. 8 ವರ್ಷಗಳ ಕಾಲ ಆ ಕಟ್ಟಡವನ್ನು ಕಟ್ಟಲಿಕ್ಕೆ ತಡವಾಗಲು ಕಾರಣ ಏನು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಎಸ್. ಬೀಳಗಿ :- ಮಾನ್ಯ ಉಪಾಧ್ಯಕ್ಷರೆ, ಈ ಒಂದು ಕಟ್ಟಡ ತಡ ವಾಗುವುದಕ್ಕೆ ಮೂಲ ಕಾರಣ ಹಣಕಾಸಿನ ತೊಂದರೆ, ಹೀಗಾಗಿ ಆ ಕಾರ್ಯ ಕೈಗೆತ್ತಿ ಕೊಳ್ಳುವುದಕ್ಕಾಗಲಿಲ್ಲ. ಈಗ ಮಾನ್ಯ ಸದಸ್ಯರಿಗೆ ಗೊತ್ತಿದ್ದಂತೆ ಈ ಕಟ್ಟಡದ ಕೆಲಸವನ್ನು ಈ ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆ.

ಶ್ರೀ ಎಸ್. ಎಂ. ದೇಸಾಯಿ :- ಪ್ರಸಕ್ತ ಸಾಲಿನಲ್ಲಿ ಪ್ರಾರಂಭ ಮಾಡುತ್ತೇವೆ ಎಂದು ಸಚಿವರು ಹೇಳಿದ್ದಾರೆ. ಆ ಕಟ್ಟಡದ ಅಂದಾಜು ಬೆಲೆ ಎಷ್ಟು ಆಗುತ್ತದೆ ಎನ್ನು ವುದನ್ನು ಮಾನ್ಯ ಸಚಿವರು ಹೇಳಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಕೆ. ಎಸ್. ಬೀಳಗಿ :- ಮಾನ್ಯ ಉಪಸಭಾಧ್ಯಕ್ಷರೆ, ಆ ಕಟ್ಟಡದ ಕಾರ್ಯದ ಪ್ಲಾನ್ ತಯಾರಾಗಿದೆ. ಈ ಕಟ್ಟಡದ ಡೀಟೈಲ್ಡ್ ಅಂದಾಜನ್ನು ಮಾಡಲಿಕ್ಕೆ ಶುರುಮಾಡಿದ್ದೇವೆ. ಅದಾದಕೂಡಲೇ ಟೆಂಡರ್ ಕರೆದು ಡಿಸೆಂಬರ್ ತಿಂಗಳ ಒಳಗೆ ಕೆಲಸ ಮಾಡಲಿಕ್ಕೆ ಪ್ರಾರಂಭ ಮಾಡುತ್ತೇವೆ.

ಶ್ರೀ ಎಸ್.ಎಂ. ದೇಸಾಯಿ :- ನನಗೆ ಗೊತ್ತಿರುವ ಹಾಗೆ 1986 ರ ಅಂದಾಜಿನಲ್ಲಿ ಆ ಕಟ್ಟಡಕ್ಕೆ 6 ಲಕ್ಷ ರೂಪಾಯಿಗಳ ಅಂದಾಜು ಆಗಿತ್ತು. ಆದರೆ ಈಗ ಈ ಕಟ್ಟಡವನ್ನು ಅಷ್ಟೇ ಹಣದಲ್ಲಿ ಕಟ್ಟಿದರೆ ಈಗಿನ ಬೆಲೆಗಳು ಹೆಚ್ಚು ಆಗಿರುವುದರಿಂದ ತೊಂದರೆ ಯಾಗುತ್ತದೆ. ಆದ್ದರಿಂದ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಈ ಬಸ್ ಸ್ಟ್ಯಾಂಡ್ ಕಟ್ಟಡ ವನ್ನು ಕಟ್ಟಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಬೀಳಗಿ :- ಅವಶ್ಯ ಎಷ್ಟು ಇದೆ ಅಷ್ಟು ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ವಿಷಯ:- ಉತ್ತರ ಕನ್ನಡ ಜಿಲ್ಲೆಯ ಸಬ್-ರಿಜಿಸ್ಟ್ರಾರ್ ಕಛೇರಿಯ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 398 (2932)

ಶ್ರೀ ಪಿ. ಎಸ್. ಜಯವಂತ (ಸಿರ್ಸಿ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಸಬ್-ರಿಜಿಸ್ಟ್ರಾರ್ ಕಛೇರಿಗಳ ಸಂಖ್ಯೆ ಎಷ್ಟು;

(ಆ) 1994-95 ರಲ್ಲಿ ಉತ್ತರ ಕನ್ನಡ ಜಿಲ್ಲೆಯಿಂದ ಸಂದಾಯವಾದ ಆದಾಯವೆಷ್ಟು;

(ಇ) ಸದರಿ ಕಛೇರಿಗಳಲ್ಲಿ ಸಿಬ್ಬಂದಿಗಳ ಕೊರತೆ ಇದೆಯೇ; ಪ್ರತಿ ಕಛೇರಿಯಲ್ಲಿ ಎಷ್ಟು;

(ಈ) ಇದರಿಂದ ಸಾರ್ವಜನಿಕರಿಗೆ ಆಗುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಸದರಿ ಕೊರತೆಯನ್ನು ನಿವಾರಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?